ದಿಃ17.08.2022 OS.No.240/2014 PW-1

ದಿ:17.08.2022 ರಂದು ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ *4* ಮತ್ತು *5*ನೇ ಪರ ವಕೀಲರಾದ ಶ್ರೀ. ಟಿ ಎನ್ ಆರ್ ವಕೀಲರಿಂದಃ

ದಾವೆಯನ್ನು ಹೂಡುವ ಸಂದರ್ಭದಲ್ಲಿ ನಮ್ಮ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಸರ್ವೆ ನಂಬರ್ *2/2* ಮತ್ತು *2/6* ಸ್ವತ್ತುಗಳನ್ನು ದಾವೆಯಲ್ಲಿ ಸೇರಿಸಿರುತ್ತೇವೆ. ದಾವಾ ಸ್ವತ್ತುಗಳಿಗೆ ನಾನೇ ಚೆಕ್ಕು ಬಂಧಿಯ ಮಾತಿಯನ್ನು ನೀಡಿರುತ್ತೇನೆ ಎಂದರೆ ಸರಿ. ಸರ್ವೆ ನಂಬರ್ *2/2* ಪೂರ್ವಕ್ಕೆ ಬೆಳ್ಳುಬ್ಬೆಗೌಡರು ಮತ್ತು ಅವರ ತಮ್ಮನಿಗೆ ಸೇರಿದ ಸ್ವತ್ತು ಎಂದರೆ ಸರಿ. ನನ್ನ ಮದುವೆಯಾಗಿ *55* ವರ್ಷಗಳಾಗಿವೆ. ನಾನು ಮದುವೆಯಾದ ದಿನದಿಂದಲೂ ಬೆಳಕೆರೆ ಗ್ರಾಮದಲ್ಲಿಯೇ ವಾಸವಾಗಿದ್ದೇನೆ. ನಮ್ಮ ಯಜಮಾನರ ಭಾಗಕ್ಕೆ ಬಂದಂತಹ ಸ್ವತ್ತುಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ನಾನು ದಾವಾ *2*ನೇ ಸ್ವತ್ತಿನ ಚೆಕ್ಕುಬಂದಿಯನ್ನು ತಪ್ಪಾಗಿ ನಮೂದು ಮಾಡಿಸಿದ್ದೇನೆ ಎಂದರೆ ಸಾಕ್ಷಿ ಸುಮಾರು *4-5* ಜನ ಇದ್ದ ಕಾರಣ ನನಗೆ ಹೆಸರುಗಳು ನೆನಪಾಗಿಲ್ಲ ಎಂದು ನುಡಿಯುತ್ತಾರೆ. ನಿಪಿ-*12* ಮತ್ತು *13* ನಾನೇ ಸಲ್ಲಿಸಿರುವ ನಿಶಾನೆಗಳಾಗಿವೆ ಎಂದರೆ ಸರಿ. ನಿಪಿ-*13*ರಲ್ಲಿ ಕಾಣುತ್ತಿರುವ ಆರ್ ಸಿ ಸಿ ಮನೆ ಮಿಲ್ಟ್ರಿ ಓದೇಗೌಡರಿಗೆ ಸೇರಿದ ಮನೆ ಎಂದರೆ ಸರಿ. ನಿಪಿ-*13*ರಲ್ಲಿ ಕಾಣುತ್ತಿರುವ ಮನೆಯ ಪೂರ್ವಕ್ಕೆ ಬೆಳ್ಳುಬ್ಬೆಗೌಡರಿಗೆ ಸೇರಿದ ಜಮೀನು ಎಂದರೆ ಸರಿ. ನಿಪಿ-*13*ರಲ್ಲಿ ಕಾಣುತ್ತಿರುವ ಶೆಡ್ಡು ಬೆಳ್ಳುಬ್ಬೆಗೌಡರ ತಮ್ಮನ ಮಕ್ಕಳಾದ ಜಗದೀಶ ಮತ್ತು ನಾಗೇಶ್ ಹಾಕಿಕೊಂಡಿರುವ ಶೆಡ್ಡು ಎಂದರೆ ಸರಿ. ನಾನು ನಮ್ಮ ಕಾಣುವ ಯಾವುದೇ ಪೋಟೋವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿ ಅದರಲ್ಲಿರುವ ಸೀಟಿನ ಮನೆಯನ್ನು ಅವರ ಮನೆ ಎಂದು ಒಪ್ಪಿಕೊಂಡಿರುತ್ತಾರೆ ಅದನ್ನು ನಿಡಿ-*1* ಎಂದು ಗುರುತಿಸಲಾಯಿತು. ಸಾಕ್ಷಿಗೆ

ಮತ್ತೊಂದು ಫೋಟೋವನ್ನು ತೋರಿಸಿ ಅದರಲ್ಲಿ ಮನೆ ಮಿಲ್ತ್ರಿ ಓದೇಗೌಡರಿಗೆ (ಮಿಲ್ತ್ರಿ ಓದೇಗೌಡರು 4ನೇ ಪ್ರತಿವಾದಿಯ ಗಂಡ 5ನೇ ಪ್ರತಿವಾದಿಯವರ ಮಾವ) ಸೇರಿದ ಮನೆ ಎಂದರೆ ಸರಿ ಸದರಿ ಫೋಟೋವನ್ನು ನಿಡಿ-2 ಎಂದು, ನಿಡಿ-2ರಲ್ಲಿ ಕಾಣುವ ಕಾಲು ದಾರಿಗೆ 4ಮತ್ತು 5ನೇ ಪ್ರತಿವಾದಿಯವರು 3 ಅಡಿ ಜಾಗವನ್ನು ಬೆಳ್ಳುಬ್ಬೆಗೌಡರು 3ಅಡಿ ಜಾಗವನ್ನು ಒಟ್ಟು 6 ಅಡಿ ಜಾಗವನ್ನು ಬಿಟ್ಟಿದ್ದಾರೆ ಎಂದರೆ ಸರಿಯಲ್ಲ. 6 ಅಡಿ ಓಡಾಡು ಬಿಟ್ಟುವ ಕಾಲುದಾರಿಗೆ 4 ಮತ್ತು 5ನೇ ಪ್ರತಿವಾದಿಯವರಾಗಲೀ ಬೆಳ್ಳುಬ್ಬೆಗೌಡರ ಮಕ್ಕಳಾಗಲೀ ಓಡಾಡಲು ಬೇಲಿಯನ್ನು ಹಾಕಿ ಓಡಾಡಲು ಅಡೆತಡೆ ಮಾಡುತ್ತಿಲ್ಲ ಎಂದರೆ ಸಾಕ್ಷಿ ಅಡೆತಡೆ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ದಾವೆಯನ್ನು ಹೂಡುವುದಕ್ಕೂ ಮೊದಲು ನಾನು ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿದ್ದೆ. ಸಾಕ್ಷಿ ಮುಂದುವರೆದು ನಾನು 4 ಮತ್ತು 5ನೇ ಪ್ರತಿವಾದಿಯವರ ವಿರುದ್ದ ದೂರನ್ನು ನೀಡಿದ್ದೇನೆ ಆದರೆ ಬೆಳ್ಳುಬ್ಬೆಗೌಡರ ವಿರುದ್ದ ಯಾವುದೇ ದೂರನ್ನು ನೀಡಿಲ್ಲ. ಸದರಿ ದೂರಿನ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. 4 ಮತ್ತು 5ನೇ ಪ್ರತಿವಾದಿಯವರು ಓಡಾಡಲು ಯಾವುದೇ ತೊಂದರೆ ನೀಡಿದಿದ್ದರು ಸಹ ಅವರ ವಿರುದ್ದ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ 2ನೇ ಸ್ವತ್ತಿನ ಚೆಕ್ಕುಬಂಧಿಯನ್ನು ತಪ್ಪಾಗಿ ನಮೂದಾಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಏನು ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಓ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ